# 5

# ಮೋಶೆಗೂ ಮತ್ತು ಧರ್ಮಶಾಸ್ತ್ರಕ್ಕೂ ಯೇಸು ಒಡೆಯನಾಗಿದ್ದಾನೆ

ಹೊಸ ಒಡಂಬಡಿಕೆಯು ಅಂತಿಮವಾದ ಅಧಿಕಾರವನ್ನು ನಿರ್ಣಯಿಸಿದ್ದರೂ, ಎಲ್ಲರೂ ಅದನ್ನು ಅಂತಿಮವಾದ ಅಧಿಕಾರವೆಂದು ಪರಿಗಣಿಸುವದಿಲ್ಲ. ಯೇಸುವಿನ ವ್ಯಾಖ್ಯಾನದ ಬಗ್ಗೆಯೂ ಅಥವಾ ಆತನ ಉಪದೇಶವು ಪ್ರೇರಿತವಾದದ್ದು ಎಂಬ ವ್ಯಾಖ್ಯಾನವನ್ನು ಕೆಲವರು ಮನಗೊಂಡಿರುವದಿಲ್ಲ. ಕೆಲವರು ಇದನ್ನು ಒಪ್ಪಿದರೂ ಪ್ರಾಯೋಗಿಕವಾಗಿ ಹೊಸ ಒಡಂಬಡಿಕೆಯ ಅಧಿಕಾರವನ್ನು ನಿರಾಕರಿಸುತ್ತಾರೆ, ಮತ್ತು ಅದರ ಬೋಧನೆಗೆ ಅಧೀನರಾಗುವದಿಲ್ಲ. ಹೊಸ ಒಡಂಬಡಿಕೆಯ ನಂತರ ಪ್ರಕಟನೆಗಳು ನೀಡಲಾಗಿವೆಯೆಂದು ಕೆಲವರ ದೂರಾಗಿರುತ್ತವೆ ಇದರ ಯೋಚನೆಯನ್ನು ಮುಂದಿನ ಪಾಠದಲ್ಲಿ ನೋಡೋಣ. ಕೆಲವರು ಹಳೆ ಒಡಂಬಡಿಕೆಯ ನಂಬಿಕೆಯನ್ನು, ಹೊಸ ಒಡಂಬಡಿಕೆಯ ಅಧಿಕಾರಕ್ಕೆ ಸಮನಾದದ್ದೆಂದು ಅನುಸರಿಸುತ್ತಾರೆ. ಈ ಪಾಠದಲ್ಲಿ, ಏಕೆ ಈ ಅಭ್ಯಾಸವು ಸರಿಯಾಗಿರುವದಿಲ್ಲವೆಂದು - ಏಕೆ ಕ್ರಿಸ್ತನು ಮೋಶೆಗೂ ಮತ್ತು ಧರ್ಮಶಾಸ್ತ್ರಕ್ಕೂ ಒಡೆಯನಾಗಿರುವನೆಂದು ನೋಡೋಣ.

ಮತ್ತಾಯ 5:17ರಲ್ಲಿ ಯೇಸು, "ಮೋಶೆಯ ಧರ್ಮಶಾಸ್ತ್ರವನ್ನಾಗಲಿ, ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವದಕ್ಕೆ ನಾನು ಬಂದನೆಂದು ನೆನಸಬೇಡಿರಿ, ತೆಗೆದು ಹಾಕುವದಕ್ಕೆ ಬಂದಿಲ್ಲ ನೇರವೇರಿಸುವದಕ್ಕೆ ಬಂದಿದ್ದೇನೆಂದು ಹೇಳಿದನು." "ನೇರವೇರಿಸು" ಎಂಬ ಪದವು ಗ್ರೀಕ್ ಅನುವಾದದಲ್ಲಿ ಪ್ಲೆರೂ, ಎಂಬುದಾಗಿದ್ದು ಅದರರ್ಥ "ಪೂರ್ತಿಮಾಡು" ಎಂಬುದಾಗಿದೆ. ಪೂರ್ಣವಾದ ಸಮಯ ಎಂದು ಈ ಪದವು ಹೇಳುತ್ತದೆ, ಪ್ರಾರಂಭಗೊಂಡ ಸಂಗತಿಯ ಅಂತ್ಯವೆಂಬುದಾಗಿಯೂ ಮತ್ತು ಒಂದು ಸಂಗತಿಯನ್ನು ಅಂತ್ಯಗೊಳಿಸಿರುವುದಾಗಿಯೂ (ಪ್ರವಾದನೆಯಂತೆ), ಅಥವಾ ಒಂದು ಪ್ರಾರಂಭದಲ್ಲಿ[1] ಭಾಗಿಯಾಗಿ ಆ ಚಟುವಟಿಕೆಯನ್ನು ಪೂರ್ಣ ಮಾಡಿದಂತಿರುತ್ತದೆ. ಯೇಸು ಹಳೇ ಒಡಂಬಡಿಕೆಯನ್ನು "ನೆರವೇರಿಸಿದನು" ಎಂಬರ್ಥದ ಸರಿಯಾದ ಯೋಚನೆಯಾಗಿರುತ್ತದೆ. ಪೌಲನು ರೋಮಾಪುರ 10:4ರಲ್ಲಿ, "ನಂಬುವವರೆಲ್ಲರಿಗೆ ನೀತಿಯನ್ನು ದೊರಕಿಸಿರುವ ಕ್ರಿಸ್ತನಿಂದಲೇ ಕರ್ಮಮಾರ್ಗಕ್ಕೆ ಅಂತ್ಯವಾಯಿತೆಂದು ಹೇಳಿದನು." "ಅಂತ್ಯ" ಎಂಬ ಪದದ ಗ್ರೀಕ್ ಪದವು *ಟೆಲೋಸ್* ಎಂಬುದಾಗಿ "ಪೂರ್ಣ ತುಂಬಿಸು" ಎಂಬುದು ವಿವಿಧವಾದ ಅರ್ಥವನ್ನು ಒಳಗೊಂಡು ಸಂಗತಿಯನ್ನು ಸಂಪೂರ್ಣಮಾಡು ಎಂಬುದಾಗಿದೆ ಈ ದಿಸೆಯಲ್ಲಿ, ಯಾವುದಕ್ಕಾಗಿ ರೂಪುಗೊಂಡಿತ್ತೋ[2] ಅದರ ಉದ್ದೇಶವನ್ನು ಸಂಪೂರ್ಣ ಮಾಡುವದೆಂಬುದಾಗಿದೆ. ಕ್ರಿಸ್ತನಲ್ಲಿ, ದೇವರು ತನ್ನ ವಾಗ್ದಾನವನ್ನಿಟ್ಟು ಮತ್ತು ಜನರನ್ನು ಪಾಪದಿಂದಲೂ ಅದರ ಪರಿಣಾಮದಿಂದ ಕಾಪಾಡುವಂತ ತನ್ನ ಯೋಚನೆಯನ್ನು ಸಂಪೂರ್ಣಮಾಡಿದನು.

ದೇವರು ಯಾವಾಗಲು ತನ್ನ ಜನರ ಕುರಿತಾಗಿ ಚಿಂತಿಸುವನು ಎಂದು ಹಳೆ ಒಡಂಬಡಿಕೆಯಲ್ಲಿ ತಿಳಿಸಲಾಗಿದೆ. ಅದು ದೇವರ ಮೇಲಿನ ಗೌರವವನ್ನು ಮತ್ತು ನೆರೆಹೊರೆಯವರ ಗೌರವವನ್ನು ಕಾಪಾಡುವ ನಿಯಮಗಳನ್ನು ಹೊಂದಿರುತ್ತದೆ. ಹಳೆ ಒಡಂಬಡಿಕೆಯು, ಹೊಸ ಒಡಂಬಡಿಕೆಯ ಮೂಲವಾಗಿರುತ್ತದೆ. ಹಳೆ ಒಡಂಬಡಿಕೆಯ ನಿರ್ದಿಷ್ಟವಾದ

ನಿಯಮಗಳು ನಮಗೆ ಒಳಪಡುವದಿಲ್ಲ,[3] "ದೇವರ ಕಡೆಗೆ ಒಡಂಬಡಿಕೆಯನ್ನು ಮತ್ತು ಚಿತ್ತವನ್ನು" ಯೇಸು ಹೊಂದಿರುವನು (ಇಬ್ರಿಯ 9 ನೋಡಿ). ಪರಲೋಕದಲ್ಲೂ ಭೂಮಿಯಲ್ಲೂ ಕಟ್ಟುವ ಮತ್ತು ಬಿಚ್ಚುವ ಅಥವಾ ಈಗಾಲೇ ಆಗಿರುವ, ಕುರಿತ ನಿಯಮಗಳ ಅಧಿಕಾರವನ್ನು ಯೇಸು ತನ್ನವರಿಗೆ ಹಸ್ತಾಂತರ ಮಾಡಿರುವನು. (ನೋಡಿರಿ ರೋಮಾಪುರ 13:8-10.) ಇದರ ಜೊತೆಯಲ್ಲಿ, ಹಳೆ ಒಡಂಬಡಿಕೆಯ ಪ್ರಮುಖವಾದ, ದೇವರ ಸ್ವಭಾವ ಮತ್ತು ಜನರೊಂದಿಗಿನ ದೇವರ ಸಂಪರ್ಕವನ್ನು ನೀಡಲಾಗಿದೆ. ಹಳೆ ಒಡಂಬಡಿಕೆಯಿಂದ ಕ್ರೈಸ್ತರಿಗೆ ಯಾವ ಪ್ರಯೋಜನವಿಲ್ಲವೆಂದು ಹೇಳಬಾರದು, ಅದರ ಬೆಲೆಯು ಅದರ ಸಲಹೆಗಳಲ್ಲಿ ಇರುತ್ತವೆ ವಿನಃ ಕ್ರೈಸ್ತ ವಿಶ್ವಾಸಕ್ಕೆ ಅಧಿಕಾರವಲ್ಲ.

## ಹಳೇ ಒಡಂಬಡಿಕೆಯ ಪಾತ್ರ

ಹೊಸ ಒಡಂಬಡಿಕೆಯಲ್ಲಿ ಯೇಸು ಹೊಂದಿರುವ ಅಧಿಕಾರವು, ಹಳೇ ಒಡಂಬಡಿಕೆಯ ನಿಯಮಗಳನ್ನು ಭರ್ತಿಮಾಡುತ್ತದೆ. ಈ ಸತ್ಯವನ್ನು ಅರಿಯದಿದ್ದರೆ, ಹಳೇ ಒಡಂಬಡಿಕೆಯ ಉದ್ದೇಶಗಳನ್ನು ತಿಳಿಯಲು ಅಸಾಧ್ಯವಾಗುತ್ತದೆ, ಆದುದರಿಂದ, ನಾವು ಹಳೇ ಒಡಂಬಡಿಕೆಯ ಪಾತ್ರವನ್ನು ನೋಡೋಣ.

ಹಳೇ ಒಡಂಬಡಿಕೆಯ ಮೂಲತಃ ಇಸ್ರಾಯೇಲ್ಯರಿಗೆ ಸಂಬಂಧಪಟ್ಟಿದ್ದರೂ, ಆ ಜನಾಂಗದಿಂದಲೇ ಮಾನವನಿಗಾಗಿ ರಕ್ಷಕನು ಬಂದನು. ಆಧಿಕಾಂಡ 12:1-3, 7ರಲ್ಲಿ ದೇವರು ಅಬ್ರಾಹಾಮನಿಗೆ ಮೂರು ವಿಧವಾದ ವಾಗ್ದಾನಗಳನ್ನು ಮಾಡಿದನು. ಅವನ ಸಂತಾನವು ದೊಡ್ಡ ಜನಾಂಗವಾಗುವುದು ಎಂದು ವಾಗ್ದಾನ ಮಾಡಿದನು, ಮತ್ತು ಅವರು ಕಾನಾನಿನಲ್ಲಿ ವಾಸಿಸುವರು ಎಂದು ಹೇಳಿದನು, ಅಬ್ರಹಾಮನು ಈಗಾಗಲೇ ವಾಸಿಸುತ್ತಿದ್ದ ಸ್ಥಳದಲ್ಲಿಯೇ, ಈ ವಾಗ್ದಾನವನ್ನು ಪಡೆದನು. ಅಬ್ರಹಾಮನ ಅಂಕುರದಿಂದಲೇ ಸಕಲ ಜನಾಂಗದವರು ಆಶೀರ್ವದಿಸಲ್ಪಡುವರು ಎಂದು ದೇವರು ಹೇಳಿದನು.

ಆದಿಕಾಂಡ 12ನೇ ಅಧ್ಯಾಯದಿಂದ ಮುಂದುವರಿದ ಉಳಿದ ಹನ್ನೊಂದು ಅಧ್ಯಾಯಗಳು ಪ್ರಪಂಚವು ಮತ್ತು ಮಾನವರು ಎಲ್ಲಿಂದ ಬಂದರೂ, ಯಾಕೆ ದೇವರು ರಕ್ಷಿಸ ಬೇಕಾಯಿತು ಎಂಬ ವಿವರಣೆಯನ್ನು ನೀಡುತ್ತದೆ. ಆದಿಕಾಂಡ 12ರಿಂದ ಮುಂದುವರಿದ ಇತರೆ ಹಳೆ ಒಡಂಬಡಿಕೆಯಲ್ಲಿ, ದೇವರು ಅಬ್ರಹಾಮನಲ್ಲಿ ನೆರವೇರಿಸಿದ ಮೂರು ವಾಗ್ದಾನಗಳ ಕುರಿತಾಗಿದೆ. ಹಳೆ ಒಡಂಬಡಿಕೆಯು ಹೊಸದಕ್ಕೆ ಮಾರ್ಗವನ್ನು ತೋರಿಸಿ, ಆ ವಾಗ್ದಾನಗಳ ಕುರಿತಾಗಿದೆ. ಹಳೆ ಒಡಂಬಡಿಕೆಯು ಹೊಸದಕ್ಕೆ ಮಾರ್ಗವನ್ನು ತೋರಿಸಿ, ಆ ವಾಗ್ದಾನಗಳ ನೆರವೇರಿಕೆಯಲ್ಲಿ ಮುಂದುವರಿಯುತ್ತದೆ. ಇಸ್ರಾಯೇಲ್ ವಾಗ್ದಾನದ ಜನಾಂಗವಾಗಿತ್ತು ಆದಿಕಾಂಡ 12ರಲ್ಲಿ ಅಬ್ರಹಾಮನು ಇದ್ದಂಥ ಸ್ಥಳವೇ ಅವರು ಮೂಲ ಸ್ಥಾನವಾಗಿತ್ತು. ನಜರೇತಿನ ಯೇಸುವು ಆ ಜನಾಂಗದಿಂದಲೇ ಬಂದವನು. (ನೋಡಿರಿ ಇಬ್ರಿಯ 1:1, 2), ಆತನ ಮೂಲಕವಾಗಿ ದೇವರು ಸಕಲ ಜನಾಂಗದವರನ್ನು ಆಶೀರ್ವದಿಸಿದನು. ಯೇಸು ದೇವರ ಮಗನೂ ಆಗಿದ್ದನು (ಮತ್ತಾಯ 1:18-25; ಲೂಕ 1:26-38; 2:1-7; ಗಲಾತ್ಯ 4:4), ಇದು ಅಬ್ರಹಾಮನ ಸಂತಾನ.

ಯೇಸು ಕ್ರಿಸ್ತನ ಆಗಮನದ ಕುರಿತಾದ, ದೇವರ ಯೋಜನೆಯೇ ಹಳೇ ಒಡಂಬಡಿಕೆಯ ದೃಷ್ಟಿ ಕೋನವಾಗಿತ್ತು. "ದೇವರು ತನ್ನ ಪರಿಶುದ್ಧ ಜನಾಂಗದ ಹಾಗು ಯಾಜಕರ ರಾಜ್ಯ ಸ್ಥಾಪಿಸಿದನು" (ವಿಮೋಚನಕಾಂಡ 19:6ಬಿ). ಇದರಲ್ಲಿ ಎರಡು ನಿಯಮಗಳಿವೆ. ಪರಿಶುದ್ಧ ಜನಾಂಗವಾಗಿ, ಅವರು ವ್ಯತ್ಯಾಸವುಳ್ಳವರಾಗ ಬೇಕಿತ್ತು. ದೇವರ ಜನರಾಗಿಯೇ ಕಾಣಿಸಿಕೊಳ್ಳಬೇಕಿತ್ತು. ಯಾಜಕ ರಾಜ್ಯದವರಾಗಿ, ದೇವರಿಗೂ ಮತ್ತು ಮನುಷ್ಯರಿಗೂ ನಡುವೆ ಸೇತುವೆಯಾಗಬೇಕಿತ್ತು - ಮತ್ತು ಯಾವ ಜನರನ್ನು ದೇವರು ಆಯ್ಕೆ ಮಾಡಿಕೊಂಡಿರಲಿಲ್ಲವೋ, ಅಂತವರನ್ನು ಆತನ ಮಗನ ರಾಜ್ಯಕ್ಕೆ ತರಬೇಕಿತ್ತು.

ವಿಮೋಚನ ಕಾಂಡದ ಮಧ್ಯದಲ್ಲಿ, ಮೋಶೆಯ ಧರ್ಮಶಾಸ್ತ್ರವು ನೀಡಲ್ಪಟ್ಟಾಗ (ಅಥವಾ ಒಡಂಬಡಿಕೆ), ನಿಯಮದ ಪ್ರಕಾರ ಸ್ಥಾಪಿತಗೊಂಡು ಅದರ ಉದ್ದೇಶವನ್ನು ತಿಳಿಸಲಾಯಿತು. ಮೋಶೆಯ ಧರ್ಮ ಪ್ರಮಾಣವು, ದೇವರ ಯೋಜನೆಯನ್ನು ಮುಂದುವರಿಸುವದಕ್ಕಾಗಿ ಇಸ್ರಾಯೇಲ್ಯರಿಗೆ ನೀಡಲಾಯಿತು. ಮುಂದೆ ಅದನ್ನು ನಿರಂತರವಾದದ್ದು ಎಂದು ಪರಿಗಣಿಸಲಾಗಲಿಲ್ಲ. ಈ ಮುಂದಿನ ವಾಕ್ಯಗಳು ಇದನ್ನು ವಿವರಿಸುತ್ತದೆ:

> ಆಗ ಮೋಶೆ ಆ ರಕ್ತವನ್ನು ತೆಗೆದುಕೊಂಡು *ಜನರ ಮೇಲೆ* ಚಿಮುಕಿಸಿ ಇಗೋ, ಈ ಗ್ರಂಥದಲ್ಲಿ ಹೇಳಿರುವ *ಎಲ್ಲಾ ಆಜ್ಞೆಗಳ ಪ್ರಕಾರ ಯೆಹೋವನು ನಿಮ್ಮ* ಸಂಗಡ ಮಾಡಿಕೊಂಡ ಒಡಂಬಡಿಕೆಯನ್ನು ಸ್ಥಿರಪಡಿಸುವ ರಕ್ತವು ಇದೇ ಅಂದನು (ವಿಮೋಚನಕಾಂಡ 24:8; ಒತ್ತಿ ಹೇಳಿದ್ದು ನನ್ನದು).

> *ಆದದರಿಂದ ಇಸ್ರಾಯೇಲ್ಯರು ಸಬ್ಬತ್‌ದಿವಸವನ್ನು ಆಚರಿಸಬೇಕು.* ಈ ಆಚರಣೆಯು ಅವರಿಗೂ *ಅವರ ಸಂತತಿಯವರಿಗೂ ಶಾಶ್ವತವಾದ ನಿಬಂಧನ.* ನನಗೂ ಇಸ್ರಾಯೇಲ್ಯರಿಗೂ ನಡುವೆ ಇದು ಸದಾಕಾಲವೂ ಗುರುತು. ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನು ಉಂಟುಮಾಡಿ ಏಳನೆಯ ದಿನದಲ್ಲಿ ಕೆಲಸವನ್ನುಮಾಡದೆ ವಿಶ್ರಮಿಸಿ ಕೊಂಡನಲ್ಲವೇ (ವಿಮೋಚನಕಾಂಡ 31:16, 17; ಒತ್ತಿ ಹೇಳಿದ್ದು ನನ್ನದು).

> ಯೆಹೋವನು ಇಂತೆನ್ನುತ್ತಾನೆ-ಇಗೋ, ನಾನು ಇಸ್ರಾಯೇಲ್ ವಂಶದವರೊಂದಿಗೂ ಯೆಹೂದ ವಂಶದವರೊಂದಿಗೂ *ಹೊಸದಾಗಿರುವ ಒಂದು ಒಡಂಬಡಿಕೆಯನ್ನು* ಮಾಡಿಕೊಳ್ಳುವ ದಿನಗಳು ಬರುವವು; ಈ *ಒಡಂಬಡಿಕೆಯು ನಾನು ಇವರ ಪಿತೃಗಳನ್ನು* ಕೈ ಹಿಡಿದು ಐಗಪ್ತದೇಶದೊಳಗಿಂದ ಕರತಂದಾಗ ಅವರ ಸಂಗಡ ಮಾಡಿಕೊಂಡ ಒಡಂಬಡಿಕೆಯಂಥದಲ್ಲ; ನಾನು ಅವರಿಗೆ ಪತಿಯಾಗಿದ್ದರೂ ಆ ನನ್ನ ಒಡಂಬಡಿಕೆಯನ್ನು ಅವರು ಮೀರಿದರಷ್ಟೆ. ಯೆಹೋವನು ಇಂತೆನ್ನುತ್ತಾನೆ - ಆ ದಿನಗಳು ಬಂದಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು ನನ್ನ ಧರ್ಮೋಪದೇಶವನ್ನು ಅವರ ಅಂತರಂಗದಲ್ಲಿ ಇಡುವೆನು, ಅವರ ಹೃದಯದೊಳಗೆ ಅದನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; ನೆರೆಹೊರೆಯವರೂ ಅಣ್ಣತಮ್ಮಂದಿರೂ ಒಬ್ಬರಿಗೊಬ್ಬರು - ಯೆಹೋವನ ಜ್ಞಾನವನ್ನು ಪಡೆಯಿರಿ ಎಂದು ಇನ್ನು ಮೇಲೆ ಬೋಧಿಸಬೇಕಾಗಿರುವದಿಲ್ಲ; ಚಿಕ್ಕವರು ಮೊದಲುಗೊಂಡು ದೊಡ್ಡವರ ತನಕ ಎಲ್ಲರೂ ನನ್ನ ಜ್ಞಾನವನ್ನು ಪಡೆದಿರುವರು; ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ. ಇದು ಯೆಹೋವನ ನುಡಿ (ಯೆರೆಮೀಯ 31:31-34; ಒತ್ತಿ ಹೇಳಿದ್ದು ನನ್ನದು).

ಈ ವಾಕ್ಯಗಳಲ್ಲಿ ಹಳೇ ಒಡಂಬಡಿಕೆಯು ನಿರ್ದಿಷ್ಟವಾದ ಉದ್ದೇಶಕ್ಕೆ ಮಾತ್ರ ಮೀಸಲಾಗಿತ್ತು. ಪ್ರತ್ಯೇಕವಾದ, ಸಮಯಕ್ಕೂ ಮತ್ತು ಜನರಿಗೆ ಮಾತ್ರ ಮೀಸಲಾಗಿತ್ತು. ಯೆಹೂದ್ಯರಲ್ಲಿದ್ದ ಆಚರಣೆಯೇ ಇದಕ್ಕೆ ಸಾಕ್ಷಿಯಾಗಿತ್ತು. ಕ್ರಿ.ಶ. ಮೊದಲ ಶತಮಾನದ ಚರಿತ್ರೆಯಲ್ಲಿ, ನಿಯಮಗಳಲ್ಲಿ ಮಿತಿಗೊಳಿಸಿದ ದೃಷ್ಟಿಯನ್ನು ನೋಡಿದರು, ಯುದಾಯತ್ವವು ವಿಸ್ತಾರಗೊಳ್ಳುವಾಗ, ಅನೇಕ ಯೆಹೂದ್ಯರಲ್ಲದವರು ಮತ್ತು ಅನ್ಯರು ಒಬ್ಬನೇ ದೇವರನ್ನು ಆರಾಧಿಸಲು ಆಶೆಪಟ್ಟರು. ಯೆಹೂದ್ಯರ ನಿಯಮಗಳನ್ನು ಪಾಲಿಸಿ, ಅವರ ಧರ್ಮಕ್ಕೆ ಒಳಗಾದವರಿಗೆ ಮಾತ್ರ, ಈ ಅವಕಾಶವನ್ನು ನೀಡಲಾಯಿತು. ಅದರ ನಿಯಮಾವಳಿಗಳನ್ನು ಅವರು ಚಾಚುತಪ್ಪದೆ ಪಾಲಿಸುತ್ತಿದ್ದರು, ಯಾಕೆಂದರೆ ಅದು ಇಸ್ರಾಯೇಲ್ ಜನರಿಗೆ ಮಾತ್ರ ಮೀಸಲಾಗಿತ್ತು.

## ಹೊಸ ಒಡಂಬಡಿಕೆ: ಒಡಂಬಡಿಕೆಯ ಬದಲಾವಣೆ

ಯೇಸು ಕ್ರಿಸ್ತನು ಸರ್ವಾಧಿಕಾರದಿಂದ ಬರುವನು ಎಂದು ಹೊಸ ಒಡಂಬಡಿಕೆಯು ತಿಳಿಸುತ್ತದೆ, ಅಂದರೆ ಹಳೆ ಒಡಂಬಡಿಕೆಯು ಯಾರನ್ನು ಇನ್ನು ಮುಂದೆ ಬಂಧನಕ್ಕೆ ಒಳಪಡಿಸುವದಿಲ್ಲ ಎಂಬ ಅರ್ಥವಾಗಿದೆ. ಎಫೆಸ 2 ಪೌಲನು ಈ ಸತ್ಯದ ಬಗ್ಗೆ ಅನ್ಯರಿಗೆ ಉತ್ತೇಜನ ನೀಡಿರುವನು. ಯೇಸುವಿನ ಬರೋಣದಲ್ಲಿ ಅವರಿಗುಂಟಾಗುವ ಪರಿಸ್ಥಿತಿಯ ಬಗ್ಗೆ ತಿಳಿಸಿದನು:

> ನೀವು ಪೂರ್ವಕಾಲದಲ್ಲಿ ಕ್ರಿಸ್ತನನ್ನು ಸೇರದವರಾಗಿದ್ದು ಇಸ್ರಾಯೇಲ್ಯ ಹಕ್ಕಿನಲ್ಲಿ ಪಾಲಿಲ್ಲದವರೂ [ಅಬ್ರಹಾಮನಿಗೆ ಉಂಟಾದ] ವಾಗ್ದಾನಕ್ಕೆ ಸಂಬಂಧವಾದ ಒಡಂಬಡಿಕೆಗಳಲ್ಲಿ ಸೇರದವರೂ ಈ ಲೋಕದಲ್ಲಿ ಯಾವ ನಿರೀಕ್ಷೆಯಿಲ್ಲದವರೂ ದೇವರನ್ನರಿಯದವರೂ ಆಗಿದ್ದಿರೆಂದು ಜ್ಞಾಪಕಮಾಡಿ ಕೊಳ್ಳಿರಿ. ಈಗಲಾದರೋ ಮೊದಲು ದೂರವಾಗಿದ್ದ ನೀವು ಕ್ರಿಸ್ತ ಯೇಸುವನ್ನು ಸೇರಿದವರಾಗಿದ್ದು ಆತನ ರಕ್ತದ ಮೂಲಕ ಸಮೀಪಸ್ಥರಾದಿರಿ (ವಚನಗಳು 2:12, 13).

ಈ ಬದಲಾವಣೆಗೆ ಕಾರಣವೇನೆಂದರೆ, "ಕ್ರಿಸ್ತನು ತನ್ನ ದೇಹದ ಮೂಲಕ ಅದನ್ನು ಇಲ್ಲದಂತೆ ಮಾಡಿದನು ... ಸಂಸ್ಕಾರಗಳನ್ನೂ ಒಳಗೊಂಡಿದ್ದ ಧರ್ಮಶಾಸ್ತ್ರವನ್ನು ತೆಗೆದು ಹಾಕಿ ಸಮಧಾನವನ್ನು ಉಂಟು ಮಾಡಿ ಉಭಯರನ್ನು ತನ್ನಲ್ಲಿ ಒಬ್ಬ ನೂತನ ಪುರುಷನನ್ನಾಗಿ ನಿರ್ಮಿಸಿದ್ದಾನೆ" (ವಚನ 15). ಧರ್ಮಶಾಸ್ತ್ರವು, ಅನ್ಯರನ್ನು, "ಇಸ್ರಾಯೇಲ್ಯರ ಸಾಮಾನ್ಯವಾದ ಆಶೀರ್ವಾದಗಳಿಂದ" ಬೇರ್ಪಡಿಸಿತ್ತು ಎಂದು ಹಳೆ ಒಡಂಬಡಿಕೆಯಲ್ಲಿ ನೋಡುತ್ತೇವೆ, ಆದರೆ ಪೌಲನು ಹಳೇ ಒಡಂಬಡಿಕೆಯು, ನಂಬಿಕೆಯ ಅಭ್ಯಾಸಕ್ಕೆ ಮಾರ್ಗದರ್ಶನ ಎಂದಿರುವನು.

ಕ್ರಿಸ್ತನಲ್ಲಿದ್ದಂತ ನಂಬಿಕೆಯನ್ನು ನಿರಾಕರಿಸುವ ಹಂತದಲ್ಲಿದ್ದಂಥ ಯೆಹೂದ್ಯ ಕ್ರೈಸ್ತರಿಗೆ ಉತ್ತೇಜನ ನೀಡಲು ಇಬ್ರಿಯ ಪುಸ್ತಕವನ್ನು ಬರೆಯಲಾಗಿದೆ, ಹಳೆ ಒಡಂಬಡಿಕೆಯಿಂದ, ಹೊಸ ಒಡಂಬಡಿಕೆಗೆ ಬದಲಾದ ನೂತನವಾದ ಒಡಂಬಡಿಕೆಯ ಕುರಿತು ದೃಷ್ಟಿಹರಿಸಲಾಗಿದೆ. ಇಬ್ರಿಯ 8:8-12ರಲ್ಲಿ, ಪ್ರೇರಿತನಾದ ಬರಹಗಾರನು ಯೆರೆಮೀಯ 31:31-34ರ ವಾಕ್ಯವನ್ನು ದಾಖಲು ಮಾಡಿ, ಮೊದಲನೆಯ ಒಡಂಬಡಿಕೆಯಲ್ಲಿ ಯಾವುದೇ ತಪ್ಪುಗಳು ಇಲ್ಲದೆ ಇದ್ದರೂ ಸಹ ಅದರ ಬದಲಾಗಿ ಇನ್ನೊಂದನ್ನು ಬದಲಿಸಬೇಕಾಯಿತು. ವಚನ 13ರಲ್ಲಿ ಸಂಕ್ಷೇಪವಾಗಿ: "ಮೊದಲಿದ್ದದ್ದನ್ನು ಹಳೇದಾಗಿ ಮಾಡಿದ್ದಾನೆ. ಆದರೆ ಹಳೆದಾಗುತ್ತಾ ಮುದಿಯಾಗುವಂಥದ್ದಕ್ಕೆ ಅಂತ್ಯವು ಸಮೀಪವಾಗಿದೆ." ಯೇಸು ಕ್ರಿಸ್ತನ ಸ್ಪರ್ಷದಿಂದ ಹಳೆಯದನ್ನು ತೆಗೆದು ಹಾಕಿ, ಹೊಸ ಒಡಂಬಡಿಕೆಯನ್ನಾಗಿ ಮಾಡಲಾಯಿತು (ಇಬ್ರಿಯ 9:15-17; 10:8-10ನ್ನು ನೋಡಿರಿ).

ಮೋಶೆಗಿಂತ, ಯೇಸು ದೊಡ್ಡವನು ಎಂಬುದಾಗಿ ಹೇಳಲಾಗಿರುವ ವಿಷಯವು ಈ ಎರಡು ಒಡಂಬಡಿಕೆಗಳನ್ನು ಯೇಸು ಒಂದು ಗೂಡಿಸಿ, ಆತನ ಬರೋಣದ ಕುರಿತು ತಿಳಿಸಲಾಗಿದೆ.

> ಆದದರಿಂದ ದೇವಜನರಾದ ಸಹೋದರರೇ, ಪರಲೋಕಸ್ವಾಸ್ಥ್ಯಕ್ಕಾಗಿ ನನ್ನೊಂದಿಗೆ ಕರೆಯಲ್ಪಟ್ಟವರೇ, ನಾವು ಪ್ರತಿಜ್ಞೆಮಾಡಿ ಒಪ್ಪಿಕೊಂಡಿರುವ ದೇವ ಪ್ರೇಷಿತನೂ ಮಹಾಯಾಜಕನೂ ಆಗಿರುವ ಯೇಸುವನ್ನು ಲಕ್ಷ್ಯವಿಟ್ಟು ಯೋಚಿಸಿರಿ.
> ಮೋಶೆಯು ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದಂತೆಯೇ ಯೇಸುವೂ ತನ್ನನ್ನು ನೇಮಿಸಿದಾತನಿಗೆ ನಂಬಿಗಸ್ತನಾಗಿದ್ದಾನೆ. ಮನೆಗಿಂತ ಮನೆಕಟ್ಟಿದವನಿಗೆ ಹೆಚ್ಚಾದ ಮಾನವಿರುವದರಿಂದ ಮೋಶೆಗಿಂತ ಯೇಸುವು ಹೆಚ್ಚಾದ ಮಾನಕ್ಕೆ ಯೋಗ್ಯನೆಂದೆಣಿಸಲ್ಪಟ್ಟಿದ್ದಾನೆ. ಪ್ರತಿ ಮನೆಯನ್ನು ಯಾರೋ ಒಬ್ಬನು ಕಟ್ಟಿರುವನು; ಸಮಸ್ತವನ್ನು ಕಟ್ಟಿದಾತನು ದೇವರೇ. ಮೋಶೆಯು ಸೇವಕನಾಗಿ ದೇವರ ಮನೆಯಲ್ಲೆಲ್ಲಾ ನಂಬಿಗಸ್ತನಾಗಿದ್ದನು; ಅವನು ಮುಂದೆ ಪ್ರಕಟವಾಗಬೇಕಾಗಿದ್ದ

> ಸಂಗತಿಗಳಿಗೆ ಸಾಕ್ಷಿಯಾಗಿದ್ದನು. ಕ್ರಿಸ್ತನಾದರೋ ಮಗನಾಗಿ ದೇವರ ಮನೆಯ ಮೇಲೆ ಅಧಿಕಾರಿಯಾಗಿದ್ದಾನೆ; ನಾವು ನಮ್ಮ ಧೈರ್ಯವನ್ನೂ ನಮ್ಮ ನಿರೀಕ್ಷೆಯಿಂದುಂಟಾಗುವ ಉತ್ಸಾಹವನ್ನೂ ಕಡೇ ತನಕ ದೃಢವಾಗಿ ಹಿಡುಕೊಂಡವರಾದರೆ ನಾವೇ ದೇವರ ಮನೆಯವರು (ಇಬ್ರಿಯ 3:1-6).

ಸಂದೇಶವು ಸರಳವಾಗಿದೆ: ಹಳೆಯ ಒಡಂಬಡಿಕೆಯು, ಜನರು ಯಾವ ರೀತಿಯಲ್ಲಿ ಜೀವಿಸಬೇಕು ಎಂಬ ನಿಯಮಕ್ಕೆ ಒಳಪಡಿಸಿತ್ತೋ. ಈಗ ಅದರಲ್ಲಿ ಯಾವುದೇ ಪರಿಣಾಮವು ಇರದೆ, ಯೇಸು ಮೋಶೆಗೂ ಒಡೆಯನು ಎಂದು ರೂಪಿಸಿರುತ್ತದೆ.

## ಮುಕ್ತಾಯ

ಹಳೆ ಒಡಂಬಡಿಕೆಯಲ್ಲಿ ನಮಗೆ ಯಾವುದೇ ಪ್ರಯೋಜನವು ಇನ್ನು ಮುಂದೆ ಇಲ್ಲವೆಂಬ ಅರ್ಥವೇ? ಇಲ್ಲ. ಅದರ ಪುಟಗಳನ್ನು ಅಭ್ಯಾಸಿಸುವಾಗ, ದೇವರ ಸದ್ಗುಣಗಳನ್ನು ಮತ್ತು ಜನರು ಆತನ ಒಡಂಬಡಿಕೆಯ ಸಂಧಾನಕ್ಕೆ ಹೇಗೆ ಒಳಪಡಬಹುದು ಎಂಬುದನ್ನು ತಿಳಿಯುತ್ತೇವೆ. ಕ್ರಿಸ್ತನಿಗಾಗಿ ಸಿದ್ಧಗೊಳ್ಳುವ ಅಗತ್ಯತೆಗಳನ್ನು ತಿಳಿಯುತ್ತೇವೆ. ದೇವರು ನಂಬಿಗಸ್ತರನ್ನು ಪರಾಂಬರಿಸಿ, ಆತನ ವಾಗ್ದಾನವನ್ನು ನೆರವೇರಿಸುವ ರೂಪವನ್ನು ಕಾಣುತ್ತೇವೆ. ದೇವರ ವಾಕ್ಯಕ್ಕೆ ಅವಿಧೇಯರಾದರೆ, ಅದರಿಂದ ಉಂಟಾಗುವ ಪರಿಣಾಮದ ಕುರಿತು ತಿಳಿಯುತ್ತೇವೆ.

ಈ ವಿಷಯಗಳು ಸತ್ಯವಾಗಿದ್ದರೂ, ಆರಾಧನೆಯ ಮತ್ತು ಜೀವನಕ್ಕೆ ಅಗತ್ಯವಿರುವ ಹಳೇ ಒಡಂಬಡಿಕೆಯ ನೀತಿ ನಿಯಮಗಳು ಈ ದಿನಗಳಿಗೆ ಅನ್ವಯಿಸುವದಿಲ್ಲ. ಮೊದಲ ಒಡಂಬಡಿಕೆಯು ತನ್ನ ಉದ್ದೇಶವನ್ನು ಈಡೇರಿಸಿದೆ. ಅಂದರೆ ಕ್ರಿಸ್ತನಿಗಾಗಿ ಲೋಕವನ್ನು ಸಿದ್ಧಪಡಿಸಿದೆ, ದೇವರೊಂದಿಗಿನ ಅನ್ಯೋನ್ಯತೆಯನ್ನು ತಿಳಿಸದೆ, ಮತ್ತು ದೇವರ ಕೃಪೆಯ ಅತಿ ಅಗತ್ಯತೆಯನ್ನು ಮುಂತಿಳಿಸಿರುತ್ತದೆ. ಆದರೆ, ಈಗ ಸರ್ವಾಧಿಕಾರವು ಯೇಸುವಿಗೆ ನೀಡಲಾಗಿದೆ (ಮತ್ತಾಯ 28:18). ಆತನ ಮೂಲಕವಾಗಿಯೇ ಲೋಕಕ್ಕೆ ತೀರ್ಪಾಗುತ್ತದೆ (ಅಪೊಸ್ತಲರಕೃತ್ಯಗಳು 17:30, 31). ಆತನ ಮಾತುಗಳಿಂದಲೇ ತೀರ್ಪಾಗುವುದು ಎಂದು ಯೇಸು ಹೇಳಿರುವದರಲ್ಲಿ ಈ ವಿಷಯವನ್ನು ತಿಳಿಯುತ್ತೇವೆ (ಯೋಹಾನ 12:48). ಈತನ ಒಡಂಬಡಿಕೆಗೆ ಬೇರೆ ಯಾವುದನ್ನು ಸೇರಿಸುವ ಅಗತ್ಯವಿಲ್ಲ, ಮೋಶೆಯ ಧರ್ಮ ಶಾಸ್ತ್ರವು ಅವಶ್ಯವಿಲ್ಲ. ದೇವರ ಸೇವೆಯನ್ನು ಆತನ ಹೆಸರಿನಲ್ಲೆ ಮಾಡ ಬೇಕು (ಕೊಲೊಸ್ಸೆ 3:17). "ಆತನು ಮಾರ್ಗವು ಸತ್ಯವು ಜೀವವು ಆಗಿರುವನು" (ಯೋಹಾನ 14:6ಬಿ), ಆತನ ಹೆಸರಿನಲ್ಲಿ ಮಾತ್ರ ರಕ್ಷಣೆ ಇರುತ್ತದೆ (ಅಪೊಸ್ತಲಕೃತ್ಯಗಳು 4:10-12). ಆತನು ಮೋಶೆಗೂ ಒಡೆಯನಾಗಿರುವದರಿಂದ, ತಲೆ ಬಾಗಿ ಆತನನ್ನು ಆರಾಧಿಸೋಣ.

---

ಟಿಪ್ಪಣಿಗಳು

[1]This is a summary of the main definitions in Walter Bauer *A Greek-English Lexicon of the New Testament and Other Early Christion Literature,* 3d ed., rev. ed and Frederick William Danker (Chicago: University of Chicago Press, 2000), 827-29. [2]Ibid., 998. William Barclay discussed *teleios*, the adjective form of *telos*, in his comments on the word (translated "perfect") in Matthew 5:48. (William Barclay, *The Gospel of Matthew,* vol. 1, rev. ed., The Daily Study Bible Series [Philadelphia: Westminster Press, 1975], 177-78.) [3]ಸಬ್ಬತ್ತಿನ ವಿಷಯದಲ್ಲಿ ಹಳೇ ಒಡಂಬಡಿಕೆಯ ಅಧ್ಯಯನ ಅತಿ ಮುಖ್ಯವಾದದ್ದು. ಆಧಿಸಭೆಯರು, ವಾರದ ಮೊದಲನೆಯ ದಿನ ದೇವರನ್ನು ಆರಾಧಿಸುತ್ತಿದ್ದರು, ಸಬ್ಬತ್ ಎಂಬ ನಿಯಮಕ್ಕೆ ಕ್ರೈಸ್ತರು ಒಳಪಡಬಾರದು (ಕೊಲೊಸ್ಸೆ 2:16). ಆರಾಧನೆಗಾಗಿ ಒಂದು ದಿನವನ್ನು ಕ್ರೈಸ್ತರು

ನೇಮಿಸಿಕೊಳ್ಳಬೇಕು ಪ್ರಕಟನೆಯಲ್ಲಿ ಯೋಹಾನನು "ಕರ್ತನ ದಿನ" ಎಂದಿದ್ದಾನೆ. ನಾಲ್ಕನೆಯ ಆಜ್ಞೆ, ಅದನ್ನು ಮಾತ್ರ ಹೊಸ ಒಡಂಬಡಿಕೆಯಲ್ಲಿ ವ್ಯತ್ಯಾಸವಾಗಿ ತೋರಿಸುವದಿಲ್ಲ. ಆರನೇ ನಿಯಮವನ್ನು ಹೊಸ ಒಡಂಬಡಿಕೆಯಲ್ಲಿ ಸೇರಿಸಲಾಗಿದ್ದರೂ (ವಿಮೋಚನಕಾಂಡ 20:13 ನರಹತ್ಯ ಮಾಡಬಾರದು), ಆ ನಿಯಮಕ್ಕೆ ವ್ಯತಿರಿಕ್ತವಾದ ಅಭ್ಯಾಸವು ಕ್ರೈಸ್ತರಲ್ಲಿದೆ (ಮತ್ತಾಯ 5:21, 22).

---

## ದೇವರ ರಕ್ಷಣೆಯ ಯೋಜನೆ

ಎದುರು ನೋಡುತ್ತಿದ್ದ ಶಿಷ್ಯನಿಗೆ "ನನ್ನನ್ನು ನಿನ್ನ ಹೃದಯಕ್ಕೆ ಆಹ್ವಾನಿಸು" ಎಂದು ಯೇಸು ತಿಳಿಸಲಿಲ್ಲ. ಅಥವಾ "ಪಾಪಿಗೆ ಪ್ರಾರ್ಥನೆಯನ್ನು" ಮಾಡು ಎಂದು ಹೇಳಲಿಲ್ಲ. ಅದರ ಬದಲಾಗಿ, ಕ್ರಿಯೆಗಾಗಿ, "ಯೇಸು ಯಾವಾಗಲು ಕರೆದನು. ತಕ್ಷಣದ ವಿಧೇಯತೆಗೆ ಕರೆದನು ..."[1] ಆತನು ಕರ್ತನು ಮತ್ತು ಕ್ರಿಸ್ತನು ಆಗಿರುವದರಿಂದ (ಅಪೊಸ್ತಲರಕೃತ್ಯಗಳು 2:36). ರಕ್ಷಣೆಯ ಕುರಿತ ಮಾತುಗಳನ್ನು ಹೇಳಲು ಆತನಿಗೆ ಅಧಿಕಾರ ನೀಡಲಾಗಿದೆ. ಆತನು ಹೇಳಿರುವುದಾದರೂ ಏನು?

ಮೊದಲನೆಯದಾಗಿ, *ಆತನಲ್ಲಿ ನಂಬಿಕೆ ಇಡಬೇಕು.* ಮಾರ್ಕ 16:16ರಲ್ಲಿ ಯೇಸು ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು ಎಂದು ಹೇಳಿರುವನು; ನಂಬದವನು ಶಿಕ್ಷೆಗೆ ಒಳಗಾಗುವನು" (ಯೋಹಾನ 3:16; 8:24). ಎರಡನೆಯದಾಗಿ, ಮಾನಸಾಂತರ ಪಡಬೇಕು, ಅಥವಾ ಪರಿವರ್ತನೆ ಹೊಂದಬೇಕು. ಪಾಪಕ್ಕೆ ಪ್ರಾಯಶ್ಚಿತ್ತ ಪಡುವದರಿಂದ ಮಾನಸಾಂತರ ಪ್ರಾರಂಭವಾಗುತ್ತದೆ, ಅದು ಪಾಪವನ್ನು ಬಿಡುವಂತೆ ಮಾಡಿ ಯೇಸುವಿನಂತಾಗಲು ಸಹಾಯಿಸುತ್ತದೆ. "ದೇವರ ರಾಜ್ಯವು ಹತ್ತಿರವಾಗಿರುವದರಿಂದ ಮಾನಸಾಂತರ ಪಡಿರಿ" ಇದು ಯೇಸುವಿನ ಮುಖ್ಯ ಸಂದೇಶ (ಮತ್ತಾಯ 4:17) ಪಂಚಾಶತ್ತಮ ದಿನದಂದು ಕೇಳಿದವರು ಕ್ರಿಸ್ತನ ಮರಣವನ್ನು ಒಪ್ಪಿಕೊಂಡರು. ಮತ್ತು ಏನು ಮಾಡಬೇಕು ಎಂದು ಕೇಳಿದರು. ಪೇತ್ರನು ಅವರಿಗೆ ಪ್ರತಿಯೊಬ್ಬರು "ಮಾನಸಾಂತರ ಪಟ್ಟು ಯೇಸು ಕ್ರಿಸ್ತನ ಹೆಸರಿನಲ್ಲಿ ಪಾಪಪರಿಹಾರಕ್ಕಾಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" ಎಂದು ಹೇಳಿದನು (ಅಪೊಸ್ತಲರಕೃತ್ಯಗಳು 2:38). ಮೂರನೆಯದಾಗಿ ಸಾಕ್ಷಿಯಾಗ ಬೇಕು. "... *ಹಾಗಾದರೆ ಯಾವನಾದರು ಮನುಷ್ಯನ ಮುಂದೆ ಯೇಸುವಿನವನೆಂದು ಒಪ್ಪಿಕೊಳ್ಳುವನೋ,* ನಾನು ಸಹ ಅವನನ್ನು ನನ್ನವನೆಂದು ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ಒಪ್ಪಿಕೊಳ್ಳುವೆನು, ಆದರೆ ಯಾವನು ಮನುಷ್ಯರ ಮುಂದೆ ತಾನು ಯೇಸುವಿನವನಲ್ಲವನೆಂದು ಹೇಳುವನೋ ಅವನನ್ನು ನಾನು ಸಹ ಪರಲೋಕದಲ್ಲಿರುವ ನನ್ನ ತಂದೆಯ ಮುಂದೆ ನನ್ನವನಲ್ಲವೆಂದು ಹೇಳುವೆನು" (ಮತ್ತಾಯ 10:32, 33; ರೋಮಾಪುರ 10:9, 10ನೋಡಿ). ಕೊನೆಯದಾಗಿ, *ನಾವು ದೀಕ್ಷಾಸ್ನಾನಕ್ಕೆ ಒಳಪಡಬೇಕು,* ಮುಳುಗಿಸುವ ಸ್ನಾನ, ನಂತರ ರಕ್ಷಿಸಲ್ಪಟ್ಟವರಲ್ಲಿ ಸೇರುತ್ತೇವೆ (ಮಾರ್ಕ 16:16). ಮತ್ತಾಯ 28:19 "ಅವರನ್ನು ತಂದೆ ಮಗನ ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸುವದರಿಂದ" "ಶಿಷ್ಯತ್ವದ ಭಾಗವಾಗಿರುತ್ತದೆ."

ಪ್ರತಿ ವಿಶ್ವಾಸಿಯು ಇದನ್ನು ತಿಳಿಸಲಾರನು. ಆದರೆ ಯೇಸು ಹೇಳಿದ್ದು, "ನೀವು ನನ್ನನ್ನೂ ಪ್ರೀತಿಸುವುದಾದರೆ ನನ್ನ ಆಜ್ಞೆಗಳನ್ನು ಕೈಗೊಂಡು ನಡೆಯುವಿರಿ" (ಯೋಹಾನ 14:15). ಆಗ ರಕ್ಷಿಸುವರ ಜೊತೆ ಪಾಲುಗಾರರಾಗುತ್ತೇವೆ. ಇದಕ್ಕೆ ವಿದೇಯರಾಗಿರುವಿರಾ?

---

ಟಿಪ್ಪಣಿ

[1]Cecil May, Jr., "Casual Seekers at the Narrow Gate," *Preacher Talk* 20 (July 2004): 3.